ಜಿಪುಣ ಪ್ರಾಣಬಿಟ್ಟ. ಅವನ ಹೆಣವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಅಗ್ನಿಗೆ ಆಹುತಿಯಿತ್ತರು. ಮಕ್ಕಳು ಮನೆಗೆ ಬಂದು ಪೆಟ್ಟಿಗೆಯಲ್ಲಿ ಎಷ್ಟು ಹಣ ಇದೆ ಎಂದು ನೋಡಲು ಹೊರಟರು. ಆದರೆ ಎಷ್ಟೇ ಹುಡುಕಿದರೂ ಬೀಗದಕ್ಕೆ ಸಿಗಲೇ ಇಲ್ಲ. ಮರುದಿನ ಆ ಜಿಪುಣನ ಅಸ್ಥಿಯನ್ನು ಸಂಗ್ರಹಿಸಲು ಸ್ಮಶಾನಕ್ಕೆ ಹೋದಾಗ ಬೂದಿಯ ಒಳಗೆ ಬೀಗದಕ್ಕೆ ಸಿಕ್ಕಿತು. ಆಗ ಅವರಿಗೆ ಗೊತ್ತಾಯಿತು ಆ ಮನುಷ್ಯ ಗಂಗಾಜಲವನ್ನು ಬಿಡುವಾಗ ಏಕೆ ಬಾಯಿ ತೆರೆಯಲಿಲ್ಲ ಎಂದು. ಸಂಸ್ಕೃತದಲ್ಲಿ ಒಂದು ವಿಡಂಬನಾತ್ಮಕ ಶ್ಲೋಕವಿದೆ:

**ಕೃಪಣೇನ ಸಮೋ ದಾತಾ ನ ಭೂತೋ ನ ಭವಿಷ್ಯತಿ|**
**ಅಸ್ಪೃಶನ್ ಏವ ವಿತ್ತಾನಿ ಯಃ ಪರೇಭ್ಯಃ ಪ್ರಯಚ್ಛತಿ||**

'ಜಿಪುಣನಿಗೆ ಸಮಾನನಾದ ದಾನಶೂರನು ಎಲ್ಲಿಯೂ ಯಾವ ಕಾಲದಲ್ಲಿಯೂ ದೊರೆಯನು. ತಾನು ಐಶ್ವರ್ಯವನ್ನು ಮುಟ್ಟದೆಯೇ ಇತರರಿಗೆ ಅದನ್ನು ಅವನು ನೀಡುತ್ತಾನೆ.' ■

# ಪುಸ್ತಕಪಾಂಡಿತ್ಯ ಯಾತಕ್ಕೂ ಬಾರದು.



ಕಲೆ : ರಾಮ ಗೌತಮ

ಅನೇಕ ಪುಸ್ತಕಗಳನ್ನು ಓದಿ ಪಾಂಡಿತ್ಯವನ್ನು ಪಡೆದರೆ ಯಾವ ಪ್ರಯೋಜನವೂ ಇಲ್ಲ. ನಾವು ಉತ್ತಮರಾಗುವುದು, ಉತ್ತಮ ಜೀವನ ನಡೆಸುವುದು ಮುಖ್ಯ. ಪಾಂಡಿತ್ಯ ಇದಕ್ಕೆ ಸಹಾಯ ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ಅದಕ್ಕೆ ಯಾವ ಬೆಲೆಯೂ ಇಲ್ಲ. ಆಹಾರ ಪದಾರ್ಥಗಳನ್ನು ತಿನ್ನದೆ ಹಾಗೇ ಇಟ್ಟುಕೊಂಡರೆ ಏನು ಪ್ರಯೋಜನ? ಹಾಗೆಯೇ ಪಾಂಡಿತ್ಯವು ನಮ್ಮ ಬಾಳಿನ ಬೆಳವಣಿಗೆಗೆ ಸಹಾಯ ಮಾಡದಿದ್ದರೆ ಏನು ಪ್ರಯೋಜನ?

ಇಬ್ಬರು ಬ್ರಾಹ್ಮಣ ಪಂಡಿತರಿದ್ದರು. ಒಬ್ಬರು ದ್ವೈತ ಪಂಡಿತರು ಇನ್ನೊಬ್ಬರು ಅದ್ವೈತ ಪಂಡಿತರು. ಅವರವರಲ್ಲಿ ಯಾವಾಗಲೂ ವಾಗ್ವಾದ ನಡೆಯುತ್ತಿತ್ತು. ಒಮ್ಮೆ ಅವರು ಶ್ರಾದ್ಧದ ಊಟವನ್ನು ಮುಗಿಸಿಕೊಂಡು ತಮ್ಮ ಊರಕಡೆ ಹೊರಟಿದ್ದರು. ದಾರಿಯಲ್ಲಿ ಚರ್ಚೆ ಪ್ರಾರಂಭವಾಯಿತು. ಅದು ಬಿಸಿಯೇರತೊಡಗಿತು. ಅವರಿಗೆ ಕತ್ತಲೆಯಾದದ್ದು ಗೊತ್ತೇ ಆಗಲಿಲ್ಲ. ಅವರು ದಟ್ಟ ಅಡವಿಯಲ್ಲಿ ಹೋಗುತ್ತಿದ್ದಾರೆ. ಆಗ ದೂರದಲ್ಲಿ ಒಂದು ಹುಲಿ ಕಾಣಿಸಿತು. ಅವರ ಚರ್ಚೆ ಎಲ್ಲೋ ಹಾರಿಹೋಯಿತು. ಅವರು ಓಡತೊಡಗಿದರು. ಹುಲಿಯು ಅವರನ್ನು ಹಿಂಬಾಲಿಸಿತು. ಅದರಿಂದ ತಪ್ಪಿಸಿಕೊಳ್ಳಲು ಅವರು ಒಂದು ಮರವನ್ನು ಹತ್ತಿದರು. ಆ ಮರ ಅವರಿಬ್ಬರ ಭಾರವನ್ನು ಹೊರುವಷ್ಟು ದೊಡ್ಡದಾಗಿತ್ತು. ಈಗ ಹುಲಿ ಬಂದು ಅವರು ಕೆಳಗಿಳಿದು ಬರುವುದನ್ನೇ ಕಾಯುತ್ತ ಮರದ ಕೆಳಗೆ ಕುಳಿತುಕೊಂಡಿತು. ಅದು ಅಲ್ಲಿಂದ ಕದಲುವ ಸೂಚನೆ ಕಂಡುಬರಲಿಲ್ಲ. ಒಬ್ಬ ಪಂಡಿತ ಈಗೇನು ಮಾಡುವುದೆಂದು ಆಲೋಚಿಸತೊಡಗಿದ.

'ಇನ್ನೊಬ್ಬ ಪಂಡಿತನನ್ನು ಕೆಳಗೆ ತಳ್ಳಿಬಿಟ್ಟರೆ, ಹುಲಿ ಅವನನ್ನು ತೆಗೆದುಕೊಂಡು ಹೋಗುತ್ತದೆ. ಆಗ ನಾನು ತಪ್ಪಿಸಿಕೊಂಡು ಹೋಗಬಹುದು' ಎಂದು ಚಿಂತಿಸಿದ. ಇದೇ ಆಲೋಚನೆ ಇನ್ನೊಬ್ಬ ಪಂಡಿತನಲ್ಲೂ ಬಂತು. ಸರಿ, ಈಗ ಇಬ್ಬರೂ ಪರಸ್ಪರರನ್ನು ತಳ್ಳತೊಡಗಿದರು. ಸಮತೋಲ ತಪ್ಪಿ ಇಬ್ಬರೂ ಕೆಳಗೆ ಬಿದ್ದರು. ಹುಲಿಗೆ ನಿಜವಾದ 'ಬ್ರಾಹ್ಮಣ ಭೋಜನ'ವಾಯಿತು.

ಗ್ರಂಥಗಳನ್ನು ಓದಿ ಅದರ ಸಾರವನ್ನು ಮೈಗೂಡಿಸಿಕೊಳ್ಳಬೇಕು. ಸಂಸ್ಕೃತದಲ್ಲಿ ಒಂದು ಶ್ಲೋಕವಿದೆ:

ಗ್ರಂಥಾನಭ್ಯಸ್ಯ ಮೇಧಾವೀ ಜ್ಞಾನವಿಜ್ಞಾನತತ್ಪರಃ |
ಪಲಾಲಮಿವ ಧಾನ್ಯಾರ್ಥೀ ತ್ಯಜೇತ್ಸರ್ವಮಶೇಷತಃ ||

'ಜ್ಞಾನವನ್ನೂ ಅನುಭವವನ್ನೂ ಬಯಸುವ ಬುದ್ಧಿಶಾಲಿಯು ಗ್ರಂಥಗಳನ್ನು ಅಧ್ಯಯನ ಮಾಡಿ, ಅದರ ಸಾರವನ್ನು ಗ್ರಹಿಸಿಕೊಂಡು, ಧಾನ್ಯವನ್ನು ಬಯಸುವವನು ಹೊಟ್ಟನ್ನು ಬಿಸಾಕುವಂತೆ ಗ್ರಂಥಗಳನ್ನು ತ್ಯಜಿಸಬೇಕು.' ■

## ಶ್ರೀರಾಮಕೃಷ್ಣರು ಹೇಳಿದ ಕಥೆ.

# ಗಣೇಶ ಮತ್ತು ಕಾರ್ತಿಕೇಯ

ವಿಘ್ನರಾಜನು ಕಾರ್ತಿಕೇಯನು
ತಾಯ ಬಳಿ ಕುಳಿತಿದ್ದರು
ತನ್ನ ಕತ್ತಿನ ಹಾರ ಮುತ್ತಿನ
ನಿಮಗೆ ನೀಡುವೆನೆಂದಳು ‖ ೧ ‖

'ಯಾರು ಭುವನವ ಸುತ್ತಿ ಬರುವರು
ಮೊದಲಿಗಾತನೆ ಪಡೆಯುವ'
ಎಂದ ಕೂಡಲೆ ಮಗನು ಷಣ್ಮುಗ
ನವಿಲನೇರುತ ಧುಮುಕಿದ ‖ ೨ ‖

ಸಿದ್ಧಿ ಬುದ್ಧಿಯ ವಿಘ್ನರಾಜನು
ಇಲಿ ಸವಾರಿಯ ಮಾಡುತ
ಅಮ್ಮ ಭಗವತಿಯನ್ನು ಸುತ್ತಿದ
ತಾಯ ಮಡಿಲಿಗೆ ನಮಿಸಿದ ‖ ೩ ‖



ಮಾತೆಯೊಳಗಡೆ ಭುವನವಿರುವುದ
ಅರಿತ ಗಣಪನು ಗೆದ್ದನು
ಒಲಿದ ಮಾತೆಯು ಮಗನ ಕೊರಳಿಗೆ
ಹಾರ ಪ್ರೇಮದಿ ಇಟ್ಟಳು ‖ ೪ ‖

ಕರ್ಮಯೋಗಿಯು ಓಡಿ ಬಂದನು
ಸಕಲ ಭುವನವ ಸುತ್ತುತ
ಜ್ಞಾನಿ ಗಣಪತಿ ಗೆದ್ದ ಹಾರವ
ಕಂಡನರಿತನು ಮಾತೆಯ ‖ ೫ ‖

ಪದ್ಯಾನುವಾದ : ಡಾ. ಮಥ್ರ ಶಾಮ ಭಟ್ಟ
ಕಲೆ : ಪುರುಷೋತ್ತಮ ಕಾರಂತ